ಓ.ಎಸ್. ನಂ.282/2007
ಪಿಡಬ್ಲ್ಯೂ-1

ದಿನಾಂಕಃ 22-11-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ 1 ರಿಂದ 3 ಪರ ವಕೀಲರಿಂದಃ**

ದಿಃ04-01-2021 ರಂದು ನ್ಯಾಯಾಲಯವು ಮನೆತನದ ಎಲ್ಲಾ ಆಸ್ತಿಗಳನ್ನು ಹಾಜರುಪಡಿಸುವಂದೆ ಆದೇಶಿಸಿದ್ದು, ಅದರಂತೆ ನಾನು ಹಾಜರುಪಡಿಸಿಲ್ಲಾ ಎಂದರೆ ಸರಿಯಲ್ಲ. ದಾವೆ ಆಸ್ತಿಯನ್ನು ಹೊರತುಪಡಿಸಿ ನಮ್ಮ ಮನೆತನಕ್ಕೆ ಬೇರೆ ಆಸ್ತಿಗಳು ಇವೆ ಎಂದರೆ ಸರಿ. ನಮ್ಮ ಸಹೋದರಿಯರಿಗೆ ಆಸ್ತಿಯಲ್ಲಿ ಪಾಲು ಕೊಟ್ಟಿಲ್ಲಾ ಎಂದರೆ ಸರಿಯಲ್ಲ. ಯಾವ ಸರ್ವೆ ನಂಬರ ಆಸ್ತಿ ಕೊಟ್ಟಿದ್ದೇವೆ ಎಂದರೆ ನಮ್ಮ ಹಿರಿಯರು ಕೊಟ್ಟಿದ್ದಾರೆ. ಈ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮಹಾದೇವಪ್ಪನಿಗೆ ನಾಲ್ಕು ಹೆಣ್ಣುಮಕ್ಕಳು ಅಂದರೆ ಪ್ರತಿವಾದಿ ನಂ. 4 ಇದ್ದಾರೆ ಎಂದರೆ ಸರಿ. ಸದರಿ ಮಹಾದೇವಪ್ಪನಿಗೆ ಗಂಡು ಮಕ್ಕಳು ಇಲ್ಲದ ಕಾರಣ ಅವನ ಹೆಣ್ಣು ಮಕ್ಕಳಿಗೆ ಆಸ್ತಿ ಹೋಗಬಾರದು ಎನ್ನುವ ಕಾರಣಕ್ಕಾಗಿ ಸುಳ್ಳು ದಾವೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಕಂದಾಯ ಇಲಾಖೆಯವರೊಂದಿಗೆ ಮಿಲಾಪಿಯಾಗಿ ಮಹಾದೇವ ಆಸ್ತಿಗೆ ಅವಿಭಕ್ತ ಆಸ್ತಿ ಅಂತಾ ನಮೂದಿಸಿರುತ್ತೇವೆ ಎಂದರೆ ಸರಿಯಲ್ಲ. ನಮ್ಮ ಎಲ್ಲಾ ಆಸ್ತಿಗಳನ್ನು ನಾವು ವಾಟ್ನಿ ಮಾಡಿಕೊಂಡು ಕೇವಲ ಮಹಾದೇಪ್ಪನ ಆಸ್ತಿಗಳಿಗೆ ಮಾತ್ರ ಈ ದಾವೆ ಮಾಡಿದ್ದೇವೆ ಎಂದರೆ ಸರಿಯಲ್ಲ.

ನನಗೆ ಬಂದ ಪಂಚನಾಯಕನಹಟ್ಟಿ ಗ್ರಾಮದ ಜಮೀನನ್ನು ಮಾರಾಟ ಮಾಡಿರುತ್ತೇನೆ ಎಂದರೆ ಎಲ್ಲರೂ ಕೂಡಿ ಮಾರಾಟ ಮಾಡಿರುತ್ತೇವೆ. ದಾವಾ ಆಸ್ತಿಗಳಲ್ಲಿ ನನ್ನದು ಯಾವದೇ ಹಿತಾಸಕ್ತಿ ವ ಸಂಬಂಧ ಇಲ್ಲಾ, ಪ್ರತಿವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ನಾನು ಸುಳ್ಳು ದಾವೆ ಮಾಡಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಅ.

Sd/-
2ನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ,
ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ.